ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

KARNATAKA SKILL DEVELOPMENT CORPORATION

SANKALP
Ministry of Skill Development & Entrepreneurship

RASCI
Retailers Association's Skill Council of India

# ಮಾದರಿ ಪಠ್ಯಕ್ರಮ

# MODEL CURRICULUM

## ಸಂಕಲನಕಾರ
## Editor

ವಲಯ : ಮಾಧ್ಯಮ ಮತ್ತು ಮನರಂಜನೆ
ಉಪ ವಲಯ : ಸಿನಿಮಾ, ಟೆಲಿವಿಷನ್, ಅನಿಮೇಶನ್ ಮತ್ತು ಜಾಹಿರಾತು
ವೃತ್ತಿ : ಸಂಕಲನಕಾರ
ಉಲ್ಲೇಖ ಸಂಖ್ಯೆ : **MES/Q1401** ಆವೃತ್ತಿ: 1.0
**NSQF** ಮಟ್ಟ : 5

# Certificate

## CURRICULUM COMPLIANCE TO QUALIFICATION PACK – NATIONAL OCCUPATIONAL STANDARDS

is hereby issued by the

**Media and Entertainment Skill Council**

for the

## MODEL CURRICULUM

Complying to National Occupational Standards of
Job Role/ Qualification Pack: '**Editor** ' QP No. '**MES/Q1401 NSQF Level 5**'

Date of Issuance: **December 15, 2016**

Valid up to: **December 15, 2017**

* Valid up to the next review date of the Qualification Pack

Authorized Signatory
Media and Entertainment Skill Council

# ವಿಷಯ ಪಟ್ಟಿ


| | | |
|---|---|---|
| 1. | ವ್ಯಾಸಂಗ ಕ್ರಮ | 01 |
| 2. | ತರಬೇತಿದಾರರ ಪೂರ್ವಾಪೇಕ್ಷಿತ ಅರ್ಹತೆಗಳು: | 05 |
| 3. | ಅನುಬಂಧ: ಮೌಲ್ಯಮಾಪನ ಮಾನದಂಡ | 06 |

# ಸಂಕಲನಕಾರ

ವ್ಯಾಸಂಗ ಕ್ರಮ / ಪಠ್ಯಕ್ರಮ

ಈ ಕಾರ್ಯಯೋಜನೆಯನ್ನು, ಅಭ್ಯರ್ಥಿಗಳು ಮಾಧ್ಯಮ ಮತ್ತು ಮನರಂಜನೆ ವಲಯದ/ ಕೈಗಾರಿಕೆಯ ಅಡಿಯಲ್ಲಿ "ಸಂಕಲನಕಾರ" ಉದ್ಯೋಗಕ್ಕೆ ಅಗತ್ಯ ತರಬೇತಿ ಪಡೆಯಲೆಂಬ ಉದ್ದೇಶದಿಂದ ಸಿದ್ಧಪಡಿಸಲಾಗಿದೆ ಮತ್ತು ಅಭ್ಯರ್ಥಿಗಳಿಗೆ ಈ ಕೆಳಕಂಡ ಕೌಶಲ್ಯಗಳನ್ನು ಕಲಿಸಿಕೊಡುವ ಗುರಿಯನ್ನು ಹೊಂದಿದೆ.

| **ಕಾರ್ಯಯೋಜನೆಯ ಹೆಸರು** | **ಸಂಕಲನಕಾರ** | | |
|---|---|---|---|
| **ವಿದ್ಯಾರ್ಹತೆ ಪ್ಯಾಕ್ ಹೆಸರು ಮತ್ತು ಉಲ್ಲೇಖ ಸಂಖ್ಯೆ:** | ಸಂಕಲನಕಾರ; MES/ Q 1401. | | |
| **ಆವೃತ್ತಿ ಸಂಖ್ಯೆ:** | 01 | ಆವೃತ್ತಿ ಪರಿಷ್ಕರಣೆ ದಿನಾಂಕ: | ಅರ್ಹತಾ ಪ್ಯಾಕ್‌ನಂತೆ |
| **ತರಬೇತಿಗೆ ಪೂರ್ವಾಪೇಕ್ಷಿತ ಅರ್ಹತೆ:** | 10ನೇ ತರಗತಿ | | |
| **ತರಬೇತಿಯ ಫಲಿತಾಂಶ:** | **ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಕೆಳಗಿನ ವಿಷಯಗಳನ್ನು ಕಲಿಯುತ್ತಾರೆ:**<br>* **ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದು**<br>* **ಸಾಮಗ್ರಿಗಳು ಮತ್ತು ಉಪಕರಣಗಳ ನಿರ್ವಹಣೆ**<br>* **ಉತ್ಪನ್ನಗಳ (ಚಲನಚಿತ್ರಗಳ) ಸಂಕಲನ**<br>* **ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು** | | |

ಈ ಪಠ್ಯಕ್ರಮವು "ಮಾಧ್ಯಮ ಮತ್ತು ಮನರಂಜನೆ ವಲಯದ ಕೌಶಲ್ಯ ಸಮಿತಿಯು "ಸಂಕಲನಕಾರ" ಅರ್ಹತಾ ಸಮೂಹಕ್ಕೆ ನಿಗದಿಪಡಿಸಿರುವ ರಾಷ್ಟ್ರೀಯ ಔದ್ಯೋಗಿಕ ಮಾನದಂಡ(ರಾ.ಔ.ಮಾ)ಗಳಲ್ಲಿನ 4ಕ್ಕೆ 4 ಅಂಶಗಳನ್ನು ಒಳಗೊಂಡಿದೆ

| ಕ್ರ.ಸಂ. | ಘಟಕ | ಮುಖ್ಯವಾದ ಕಲಿಕೆಗಳು | ಬೇಕಿರುವ ಸಾಧನ ಸಾಮಗ್ರಿಗಳು |
|---|---|---|---|
| 1 | **ಪರಿಚಯ ಮತ್ತು ದೃಷ್ಟಿಕೋನ ಹೊಂದಿಸುವಿಕೆ**<br><br>**ಬೋಧನೆಯ ಅವಧಿ:**<br>01:00 ಗಂಟೆಗಳು<br><br>**ಪ್ರಾಯೋಗಿಕ ತರಗತಿಗಳ ಅವಧಿ**<br>01:00 ಗಂಟೆಗಳು | * ಮಾಧ್ಯಮ ಮತ್ತು ಮನರಂಜನೆಯ ಮಹತ್ವಗಳು<br>* ಧ್ವನಿ ಸಂಕಲನಕಾರರ ಪಾತ್ರ ಮತ್ತು ಹೊಣೆಗಾರಿಕೆ<br>* ಧ್ವನಿ ಸಂಕಲನಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳು | ಲ್ಯಾಪ್‌ಟಾಪ್<br>ಬಿಳಿ ಹಲಗೆ<br>ಮಾರ್ಕರ್<br>ಪ್ರೊಜೆಕ್ಟರ್ |
| 2 | **ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದು**<br><br>**ಬೋಧನೆ**<br>30:00 ಗಂಟೆಗಳು<br><br>**ಪ್ರಾಯೋಗಿಕ**<br>30:00 ಗಂಟೆಗಳು<br><br>**ಸಂಬಂಧಿಸಿದ ರಾ.ಔ.ಮಾ:**<br>MES/ N 1401 | * ನಿರ್ದೇಶಕರ ದೂರದೃಷ್ಟಿ, ಸೃಜನಶೀಲತೆ, ತಾಂತ್ರಿಕ ಅಗತ್ಯಗಳ ಜೊತೆಯಲ್ಲಿ ಕಾಲಮಿತಿ ಮತ್ತು ಅಂತಿಮ ಉತ್ಪನ್ನದ ಹೊರಪಡಿಕೆ ಕುರಿತು ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು.<br>* ಭಾವನೆಗಳ ಏರಿಳಿತ, ದೃಶ್ಯದ ವ್ಯಾಕರಣ, ಸ್ಫೂರ್ತಿದಾಯಕ ಅಂಶಗಳು ಹಾಗೂ ಪರಿವರ್ತನೆಯ ಅಗತ್ಯಗಳನ್ನೂ ಒಳಗೊಂಡಂತೆ ಕಥೆಯನ್ನು ಹೇಗೆ ಹೇಳಬೇಕೆಂಬುದನ್ನು ಅರ್ಥಮಾಡಿಕೊಳ್ಳುವುದು.<br>* ನಿರೀಕ್ಷಿತ ಫಲಿತಾಂಶವನ್ನು ಕೊಡಲು ಬೇಕಾದ ಮುಖ್ಯವಾದ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಮುಂಚಿತವಾಗಿ ಗುರುತಿಸಿ ಅವುಗಳ ಜಾರಿಗೆ ಕೆಲಸದ ಹರಿವು ನಕ್ಷೆಯನ್ನು ಸಿದ್ಧಪಡಿಸುವುದು. (ಮೇಲ್ವಿಚಾರಕರು)<br>* ಕೆಲಸದ ಹರಿವನ್ನು ಚಿಕ್ಕ ಚಿಕ್ಕ ದೈನಂದಿನ ಚಟುವಟಿಕೆಗಳಾಗಿ ವಿಂಗಡಿಸಿಕೊಳ್ಳುವುದು.<br>* ನಿರೀಕ್ಷಿತ ಫಲಿತಾಂಶವನ್ನು ಸಾಧಿಸಲು ಮಾಡಬೇಕಾದ ಪ್ರಕ್ರಿಯೆಗಳನ್ನು ಪೂರೈಸಲು ಅಗತ್ಯವಿರುವ ಶ್ರಮವನ್ನು ಮುನ್ನೆಣಿಕೆ ಮಾಡಿ, ಬಜೆಟ್ ಕಾಲಮಿತಿ ಮತ್ತು ತಾಂತ್ರಿಕ ಸಾಧ್ಯತೆಗಳ ಒಳಗೆ ಒಂದು ಕಾರ್ಯಯೋಜನೆಯನ್ನು ಮಾಡುವುದು. | ಲ್ಯಾಪ್‌ಟಾಪ್<br>ಬಿಳಿ ಹಲಗೆ<br>ಮಾರ್ಕರ್<br>ಪ್ರೊಜೆಕ್ಟರ್<br>ಸಂಕಲನ ತಂತ್ರಾಂಶ (ಫೈನಲ್ ಕಟ್ ಪ್ರೊ, ಅವಿಡ್, ಆಫ್ಟರ್ ಎಫೆಕ್ಟ್ಸ್, ಕ್ವಾಂಟೆಲ್, ಸ್ಮೋಕ್, ಫ್ಲೇಮ್, 3ಡಿಎಸ್ ಮ್ಯಾಕ್ಸ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು.. ಇತ್ಯಾದಿ) |
| 3 | **ಸಾಮಗ್ರಿಗಳು ಮತ್ತು ಉಪಕರಣಗಳ ನಿರ್ವಹಣೆ**<br><br>**ಬೋಧನೆ**<br>45:00 ಗಂಟೆಗಳು<br><br>**ಪ್ರಾಯೋಗಿಕ**<br>45:00 ಗಂಟೆಗಳು<br><br>**ಸಂಬಂಧಿಸಿದ ರಾ.ಔ.ಮಾ:**<br>MES/ N 1402 | * ಕಚ್ಚಾ ವಸ್ತುವನ್ನು/ ವೀಡಿಯೋಗಳನ್ನು ಒಟ್ಟು ಮಾಡಿ ಚಿತ್ರದ ಉತ್ಪಾದನೋತ್ತರ ಕೆಲಸಕ್ಕೆ ಬೇಕಿರುವಷ್ಟನ್ನು ಆರಿಸಿಕೊಳ್ಳುವುದು.<br>* ಕಚ್ಚಾ ವಸ್ತುವನ್ನು/ ವೀಡಿಯೋ ತುಣುಕುಗಳನ್ನು ಅರ್ಥೈಸಿಕೊಂಡು ಉತ್ಪಾದನೋತ್ತರ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವುದು<br>* ತಂತ್ರಾಂಶಗಳು ಬಳಕೆಗೆ ಸಿದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. (ಉದಾ: ಫೈನಲ್ ಕಟ್ ಪ್ರೊ, ಅವಿಡ್, ಆಫ್ಟರ್ ಎಫೆಕ್ಟ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು)<br>* ಸೂಕ್ತ ಶೇಖರಣಾ ವಿಧಾನದಲ್ಲಿ ನಡುನಡುವೆ ಪರ್ಯಾಯ ಪ್ರತಿಗಳನ್ನು ಉಳಿಸಿ ಶೇಖರಿಸಿಡುವುದು.<br>* ಅಂತಿಮ ಉತ್ಪನ್ನವನ್ನು ಅಗತ್ಯವಿರುವ ನಮೂನೆಯಲ್ಲಿ (mp4, avi, wmv, mpg, mov.. ಇತ್ಯಾದಿ) ಉಳಿಸುವುದು ಮತ್ತು ಅಗತ್ಯದ/ ಪ್ರದರ್ಶನಕ್ಕೆ ಬೇಕಿರುವ ಮಾಧ್ಯಮಕ್ಕೆ (ಡಿವಿಡಿ, ಟೇಪು, ಫಿಲ್ಮ್, ಡಿಜಿಟಲ್ ಇತ್ಯಾದಿ) ವರ್ಗಾಯಿಸುವುದು<br>* ಹಿಂದಿನ ಬೇಡದ ದಾಖಲೆ/ ಮಾಹಿತಿ ಅಂಶಗಳನ್ನೆಲ್ಲಾ ತೆಗೆದುಹಾಕಿ ತಂತ್ರಾಂಶವನ್ನು ಮುಂದಿನ ಯೋಜನೆಗೆ ಬಳಸಲು ಸಿದ್ಧಪಡಿಸಿಟ್ಟುಕೊಳ್ಳುವುದು. | ಲ್ಯಾಪ್‌ಟಾಪ್<br>ಬಿಳಿ ಹಲಗೆ<br>ಮಾರ್ಕರ್<br>ಪ್ರೊಜೆಕ್ಟರ್<br>ಸಂಕಲನ ತಂತ್ರಾಂಶ (ಫೈನಲ್ ಕಟ್ ಪ್ರೊ, ಅವಿಡ್, ಆಫ್ಟರ್ ಎಫೆಕ್ಟ್ಸ್, ಕ್ವಾಂಟೆಲ್, ಸ್ಮೋಕ್, ಫ್ಲೇಮ್, 3ಡಿಎಸ್ ಮ್ಯಾಕ್ಸ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು.. ಇತ್ಯಾದಿ) |
| 4 | **ಉತ್ಪನ್ನಗಳ (ಚಲನಚಿತ್ರಗಳ) ಸಂಕಲನ**<br><br>**ಬೋಧನೆಯ ಅವಧಿ:**<br>30:00 ಗಂಟೆಗಳು | * ಕಥೆಯ ಹರಿವನ್ನು ಮುಂದಾಗಿ ಊಹಿಸಿ, ಹೇಗಿರಬಹುದೆಂಬುದನ್ನು ಕಲ್ಪಿಸಿ ಮನದಲ್ಲಿಯೇ ಚಿತ್ರಿಸಿಕೊಳ್ಳುವುದು.<br>* ಅಗತ್ಯವಾದ ಕಥಾಹರಿವನ್ನು ಕಟ್ಟಿಕೊಡಲು ಬೇಕಾದ ತುಣುಕುಗಳು, ಧ್ವನಿ, ಸಂಗೀತ, ಸಂಭಾಷಣೆ ಗ್ರಾಫಿಕ್ಸ್ ಹಾಗೂ ವಿಶೇಷ ಪರಿಣಾಮಗಳನ್ನು ಮುಂದಾಗಿಯೇ ಮೌಲ್ಯಮಾಪನ ಮಾಡಿ ಸಿದ್ಧಪಡಿಸಿಟ್ಟುಕೊಳ್ಳುವುದು. | ಲ್ಯಾಪ್‌ಟಾಪ್<br>ಬಿಳಿ ಹಲಗೆ<br>ಮಾರ್ಕರ್<br>ಪ್ರೊಜೆಕ್ಟರ್ |

| | | | |
|---|---|---|---|
| | **ಪ್ರಾಯೋಗಿಕ**<br>**30:00 ಗಂಟೆಗಳು**<br><br>**ಸಂಬಂಧಿಸಿದ ರಾ.ಔ.ಮಾ:**<br>**MES/ N 1403** | * ವೀಡಿಯೋ, ಚಿತ್ರಗಳು ಮತ್ತು ಧ್ವನಿಗಳ ಸಂಗ್ರಹದ ಆಸ್ತಿಯನ್ನು ಜೋಪಾನವಾಗಿ ನಿರ್ವಹಿಸುವುದು<br>* ಅತ್ಯಂತ ನಿಖರವಾಗಿ ಹಾಗೂ ಪರಿಣಾಮಕಾರಿಯಾಗಿ ನವೀಕೃತ ದಾಖಲೆಗಳನ್ನು, ಧ್ವನಿ ತುಣುಕುಗಳನ್ನು, ಸೌಂಡ್ ಟ್ರಾಕ್‌ಗಳನ್ನೂ ನಿರ್ವಹಿಸುವುದು.<br>* ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುವಂತೆ ಚಿತ್ರವನ್ನು/ ಉತ್ಪನ್ನವನ್ನು ನಿರ್ದಿಷ್ಟವಾದ ನಿರೀಕ್ಷಿತ ಪರಿಣಾಮಗಳನ್ನುಂಟು (ವೇಗ, ನಿರ್ದೇಶನ, ಶೈಲಿ, ಭಾವನೆಗಳು, ಪ್ರಭಾವಶಾಲಿ) ಮಾಡುವ ಹಾಗೆ ಕತ್ತರಿಸಿ, ಜೋಡಿಸಿ, ಸಾಲುಗೊಳಿಸಿ ಸಿದ್ಧಪಡಿಸುವುದು. (ನಾನ್ ಲೀನಿಯರ್ ಸಂಕಲನವು ಕೆಲಸವನ್ನು ಹಗುರಗೊಳಿಸಿದ್ದರೂ, ಸಮಯದ ಕೊರತೆ ಮತ್ತು ಪರಿಶ್ರಮವಿರುವ ಸಾಫ್ಟ್‌ವೇರ್‌ಗಳು ಅಂತಿಮ ಫಲಿತಾಂಶದ ಮೇಲೆ ಬಹಳ ಪರಿಣಾಮ ಬೀರುತ್ತವೆ. ಇಂತಹ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಹೆಚ್ಚುವರಿ ತರಬೇತಿಯನ್ನು ನೀಡಬೇಕಾಗುವುದು)<br>* ನಿರ್ದೇಶಕರ/ಹಿರಿಯ ನಿರ್ಮಾಪಕರ ಸಲಹೆಯಂತೆ ಒಂದು ರಫ್ ಕಟ್ ಸಿದ್ಧಪಡಿಸಿ, ಅವರ ಒಪ್ಪಿಗೆಯ ಬಳಿಕ ಅಂತಿಮಗೊಳಿಸಿ. ಇದು ನಿಗದಿತ ಕಾಲಮಿತಿ ಮತ್ತು ಅವರ ಗುಣಮಟ್ಟಕ್ಕೆ ಅನುಗುಣವಾಗಿರಬೇಕು.<br>* ಅಂತಿಮ ಉತ್ಪನ್ನದಲ್ಲಿ ನಿರಂತರತೆ, ಸುಲಲಿತ ಹರಿವು/ ಪರಸ್ಪರ ಸಂಬಂಧಗಳು ಇರುವುದನ್ನು ಖಚಿತಪಡಿಸಿಕೊಳ್ಳಿ. | ಸಂಕಲನ ತಂತ್ರಾಂಶ (ಫೈನಲ್ ಕಟ್ ಪ್ರೊ, ಅವಿಡ್, ಆಫ್ಟರ್ ಎಫೆಕ್ಟ್ಸ್, ಕ್ವಾಂಟೆಲ್, ಸ್ಮೋಕ್, ಫ್ಲೇಮ್, 3ಡಿಎಸ್ ಮ್ಯಾಕ್ಸ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು.. ಇತ್ಯಾದಿ) |
| 5 | **ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು**<br><br>**ಬೋಧನೆ**<br>**10:00 ಗಂಟೆಗಳು**<br><br>**ಪ್ರಾಯೋಗಿಕ**<br>**10:00 ಗಂಟೆಗಳು**<br><br>**ಸಂಬಂಧಿಸಿದ ರಾ.ಔ.ಮಾ:**<br>**MES/ N 1404** | * ಸಂಸ್ಥೆಯ ಪ್ರಸ್ತುತ ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ನಿಯಮಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಬದ್ಧರಾಗಿ ನಡೆಯುವುದು<br>* ನಿಮ್ಮ ಕಾರ್ಯಚಟುವಟಿಕೆಗೆ ಸಂಬಂಧಪಟ್ಟ ಎಲ್ಲಾ ಸುರಕ್ಷತಾ ಕಾರ್ಯವಿಧಾನಗಳನ್ನು ಅರ್ಥಮಾಡಿಕೊಳ್ಳುವುದು<br>* ಅನಾರೋಗ್ಯ, ಅಪಘಾತಗಳು, ಬೆಂಕಿ ಆಕಸ್ಮಿಕ ಮೊದಲಾದ ಸ್ಥಳಾಂತರವನ್ನು ಬೇಡುವ ತುರ್ತುಸಂದರ್ಭಗಳನ್ನೂ ಒಳಗೊಂಡಂತೆ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರವು ರೂಪಿಸಿರುವ ನೀತಿ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು<br>* ತುರ್ತು ಸಂದರ್ಭಗಳಲ್ಲಿ ಸಂಪರ್ಕ ಮಾಡಬೇಕಾದ ಅಧಿಕಾರಿಗಳೂ ಸೇರಿದಂತೆ ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯ ನಿರ್ವಹಣೆಯ ಹೊಣೆಗಾರಿಕೆ ಹೊಂದಿರುವ ಅಧಿಕಾರಿಗಳನ್ನು ಗುರುತಿಸಿ<br>* ಮೆಟ್ಟಿಲುಗಳು, ಅಗ್ನಿಶಾಮಕ ವಾರ್ಡನ್ ಇರುವ ಜಾಗ, ಮೊದಲಾರೈಕೆ ಮತ್ತು ವೈದ್ಯಕೀಯ ನೆರವು ವಿಭಾಗಗಳೂ ಸೇರಿದಂತೆ ಎಲ್ಲೆಡೆಯಿರುವ ಸುರಕ್ಷತಾ ಸೂಚನೆಗಳನ್ನು ಗುರುತಿಸಿ.<br>* ನಿಮ್ಮ ಕೆಲಸದ ಸ್ಥಳದಲ್ಲಿ ನಿಮಗಾಗಲೀ ಅಥವಾ ಇನ್ನುಳಿದವರಿಗಾಗಲೀ ಸಂಭವನೀಯ ಅಪಾಯ ಉಂಟುಮಾಡುವ ಸನ್ನಿವೇಶ ಮತ್ತು ಸ್ಥಿತಿಗಳನ್ನು ಗುರುತಿಸಿ.<br>* ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ನೆರವಿನಿಂದ ನಿಮ್ಮ ಕೆಲಸದ ಸ್ಥಳದಲ್ಲಿ ನಿಮ್ಮ ಮತ್ತು ಇತರರ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಳ್ಳಿ<br>* ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಸದಾಕಾಲ ಸುಧಾರಿಸುವ ಸಲಹೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುವುದನ್ನು ಗಮನದಲ್ಲಿರಿಸಿ<br>* ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ.<br>* ನಿಮ್ಮ ಕೆಲಸದ ವ್ಯಾಪ್ತಿಯ ಹೊರಗೆ ಯಾವುದಾದರೂ ಅಪಾಯಕಾರಿ ಸನ್ನಿವೇಶಗಳು ಕಂಡುಬಂದರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತನ್ನು ಮತ್ತು ಆ ಸ್ಥಳದಲ್ಲಿನ ಇನ್ನಿತರನ್ನು ಜಾಗೃತಗೊಳಿಸಿ.<br>* ಅನಾರೋಗ್ಯ, ಬೆಂಕಿ ಅಪಘಾತಗಳು ಹಾಗೂ ಇನ್ನಿತರ ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ಸಂಸ್ಥೆಯು ಗೊತ್ತುಮಾಡಿದ ತುರ್ತು ಸಂದರ್ಭದ ಕಾರ್ಯವಿಧಾನಗಳನ್ನು ಪಾಲಿಸಿ. | ಲ್ಯಾಪ್‌ಟಾಪ್, ಬಿಳಿ ಹಲಗೆ, ಮಾರ್ಕರ್ ಪ್ರೊಜೆಕ್ಟರ್, ಆರೋಗ್ಯ ಮತ್ತು ಸುರಕ್ಷತಾ ಚಿನ್ಹೆಗಳು ಮತ್ತು ನಿಯಮಗಳು |

| | | | |
|---|---|---|---|
| | | * ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ | |
| 6 | **ಸಂವಹನ ಮತ್ತು ವೃತ್ತಿಪರ ಕೌಶಲ್ಯಗಳು**<br><br>**ಬೋಧನೆ**<br>**04 ಗಂಟೆಗಳು**<br><br>**ಪ್ರಾಯೋಗಿಕ**<br>**04 ಗಂಟೆಗಳು**<br><br>**ಸಂಬಂಧಿಸಿದ ರಾ.ಔ.ಮಾ:**<br>**ಸಂಪರ್ಕ ಸೇತು ಘಟಕ** | * ನೀಡಲಾದ ಕೆಲಸವನ್ನು ಪೂರ್ಣಗೊಳಿಸಲು ತೆಗೆದುಕೊಂಡ ಶ್ರಮ, ವೇಳಾಪಟ್ಟಿ ಹಾಗೂ ಫಲಿತಾಂಶಗಳನ್ನು ವರದಿ ಮಾಡಿ<br>* ಚಿತ್ರಕಥೆ ಹಾಗೂ ಪಾತ್ರಗಳ ವಿವರಣೆಯನ್ನು ಓದಿ ಅರ್ಥಮಾಡಿಕೊಳ್ಳಿ<br>* ಕೆಲಸದ ವೇಳಾಪಟ್ಟಿ ಮತ್ತು ಉತ್ಪಾದನಾ ಯೋಜನೆಗಳನ್ನು ಓದಿಕೊಳ್ಳಿ ಮತ್ತು ಕೆಲಸವು ಇದಕ್ಕೆ ತಾಳೆಯಾಗುವಂತೆ ಪ್ರಗತಿ ಹೊಂದುವುದನ್ನು ಖಚಿತಪಡಿಸಿಕೊಳ್ಳಿ.<br>* ನಿರ್ದೇಶಕರಿಗೆ ಮತ್ತು ಅನಿಮೇಶನ್ ಮೇಲ್ವಿಚಾರಕರಿಗೆ ಸೃಜನಾತ್ಮಕ ಸಲಹೆಗಳನ್ನು ನೀಡಿ<br>* ಹಿಂದಿನ/ ಮುಂದಿನ ದೃಶ್ಯಗಳಲ್ಲಿ ತೊಡಗಿಕೊಂಡಿರುವ ಸಹೋದ್ಯೋಗಿಗಳ ಜೊತೆಯಲ್ಲಿ ಪರಿಣಾಮಕಾರಿಯಾದ ಸಹಯೋಗ ಮತ್ತು ಸ್ಪಷ್ಟವಾದ ಸಂವಹನ ಇಟ್ಟುಕೊಳ್ಳಿ<br>* ನಿರ್ದೇಶಕರು, ಅನಿಮೇಶನ್ ಮೇಲ್ವಿಚಾರಕರು ಮತ್ತು ನಿರ್ಮಾಪಕರು ಬಯಸುವ ಬದಲಾವಣೆಗಳನ್ನು ಅರ್ಥಮಡಿಕೊಳ್ಳಿ<br>* ತಯಾರಿಕೆಯಲ್ಲಿ ಎದುರಾದ ಸವಾಲುಗಳನ್ನು ಚರ್ಚಿಸಿ ಮತ್ತು ಮುಂದಿನ ಯೋಜನೆಗಳಲ್ಲಿ ಅಂತಹ ಸವಾಲುಗಳನ್ನು ಎದುರಿಸುವ ಬಗೆಗಳನ್ನು ಚರ್ಚಿಸಿ<br>* ಎಲ್ಲಿ ಸಹಯೋಗದ ಅಗತ್ಯವಿದೆ, ಎಲ್ಲಿ ವ್ಯಕ್ತಿಗತ ಕೆಲಸಗಳಿವೆ ಎಂಬುದರ ಆಧಾರದ ಮೇಲೆ ಸೂಕ್ತವಾಗಿ ತೀರ್ಮಾನಗಳಾನ್ನು ಕೈಗೊಳ್ಳಿ<br>* ದೃಶ್ಯ ತುಣುಕುಗಳ ವಿಂಗಡನೆಯನ್ನು ಅರ್ಥಮಾಡಿಕೊಳ್ಳಿ ಮತ್ತು ಸಣ್ಣಸಣ್ಣ ತುಣುಕುಗಳಿಗೆ ಬೇಕಿರುವ ಶ್ರಮ/ ಸಮಯಗಳನ್ನು ಸೂಕ್ತವಾಗಿ ಯೋಜಿಸಿ<br>* ವೈಯುಕ್ತಿಕ ಕೆಲಸದ ಯೋಜನೆ ಮತ್ತು ಆದ್ಯತೆಗಳನ್ನು ಸಮಯದ ಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಸಹಕಾರಿಯಾಗುವಂತೆ ಯೋಜಿಸಿ<br>* ತಂಡ ಸದಸ್ಯನಾಗಿ ಪರಿಣಾಮಕಾರಿಯಾಗಿ ತೊಡಗಿಕೊಳ್ಳಿ ಮತ್ತು ಒಟ್ಟಾರೆ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ನೆರವಾಗಿ<br>* ಅಗತ್ಯಗಳಿಗೆ ತಕ್ಕಂತೆ ಕೆಲಸ–ಉತ್ಪನ್ನಗಳು ಮತ್ತು ಕಾರ್ಯಚಟುವಟಿಕೆಗಳಿಗೆ ಆದ್ಯತೆ ನೀಡಿ<br>* ಅಗತ್ಯವಿರುವಲ್ಲಿ ನಿರ್ದೇಶಕ, ಕಲಾನಿರ್ದೇಶಕ ಮತ್ತು ಮೇಲ್ವಿಚಾರಕರ ಸಹಕಾರವನ್ನು ಕೋರಿ<br>* ಟೀಕೆ/ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಅಗತ್ಯ ಬದಲಾವಣೆಗಳನ್ನು ಮಾಡಿ<br>* ಕೆಲಸ–ಉತ್ಪನ್ನಗಳನ್ನು ಬೇರೆಯವರ ಅಭಿಪ್ರಾಯ ಹಾಗೂ ನಿಮ್ಮ ಆತ್ಮವಿಮರ್ಶೆಯ ಆಧಾರದ ಮೇಲೆ ಸುಧಾರಿಸಿ<br>* ಗ್ರಾಹಕ/ ಕಕ್ಷಿದಾರ, ನಿರ್ದೇಶಕ, ಕಲಾನಿರ್ದೇಶಕ ಮತ್ತು ಮೇಲ್ವಿಚಾರಕರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಿ ಮತ್ತು ಸಿದ್ಧಗೊಳಿಸಿದ ಅನಿಮೇಶನ್‌ನಲ್ಲಿ ಸೂಕ್ತವಾಗಿ ಅಳವಡಿಸಿ | ಲ್ಯಾಪ್‌ಟಾಪ್<br>ಬಿಳಿ ಹಲಗೆ<br>ಮಾರ್ಕರ್<br>ಪ್ರೊಜೆಕ್ಟರ್ |
| | **ಒಟ್ಟು 240 ಗಂಟೆಗಳು**<br><br>**ಬೋಧನೆ**<br>**120 ಗಂಟೆಗಳು**<br><br>**ಪ್ರಾಯೋಗಿಕ**<br>**120 ಗಂಟೆಗಳು** | | |

**ಈ ಪಠ್ಯಕ್ರಮದ ಒಟ್ಟು ಅವಧಿ: 240 ಗಂಟೆಗಳು**
(ಈ ವ್ಯಾಸಂಗ ಕ್ರಮ/ ಪಠ್ಯಕ್ರಮವು "ಮಾಧ್ಯಮ ಮತ್ತು ಮನರಂಜನೆ ವಲಯದ ಕೌಶಲ್ಯ ಸಮಿತಿ"ಯಿಂದ ಅನುಮೋದಿಸಲ್ಪಟ್ಟಿದೆ)

## ವಿದ್ಯಾರ್ಹತೆ ಪ್ಯಾಕ್: MES/ Q 1401, ಆವೃತ್ತಿ 1 ರ ಅನ್ವಯ "ಸಂಕಲನಕಾರ" ಹುದ್ದೆಯ ತರಬೇತಿದಾರರ ಪೂರ್ವಾಪೇಕ್ಷಿತ ಅರ್ಹತೆಗಳು

| ಕ್ರ.ಸಂ. | ವಿಷಯ | ವಿವರಗಳು |
|---|---|---|
| 1 | ವಿವರಣೆ | ವಿದ್ಯಾರ್ಹತೆ ಪ್ಯಾಕ್ "Q1401" ರ ಅನ್ವಯದಂತೆ ಮೇಲೆ ನಮೂದಿಸಲಾದ ಪಠ್ಯಕ್ರಮದ ವಿವರಗಳಿಗೆ ಅನುಗುಣವಾಗಿ ಮಾನ್ಯತೆ ಪಡೆದ ತರಬೇತಿ ಸೇವೆಯನ್ನು ನೀಡುವುದು. |
| 2 | ವೈಯುಕ್ತಿಕ ಗುಣಲಕ್ಷಣಗಳು | ಅಭ್ಯರ್ಥಿಗಳಿಗೆ, ತರಬೇತಿಯ ಮೂಲಕ ವಿದ್ಯಾರ್ಥಿಗಳನ್ನು ನೇಮಕಾತಿಗೆ ಅರ್ಹರನ್ನಾಗಿಸುವ, ಸ್ಪರ್ಧಾತ್ಮಕವಾಗಿಸುವ ಕ್ಷಮತೆಯನ್ನು ಹೊಂದಿದ್ದು, ತರಬೇತಿಯನ್ನು ಮಾಡುವ ಬುದ್ಧಿಮತ್ತೆಯ ಜೊತೆಯಲ್ಲಿ ತರಬೇತಿಗೆ ಮುನ್ನಿನ/ ನಂತರದ ಚಟುವಟಿಕೆಗಳನ್ನು ಕೂಡಾ ಮಾಡಬಲ್ಲ ಸಾಮರ್ಥ್ಯ ಇರಬೇಕು. ತರಬೇತಿಯ ವಿಷಯಗಳು ಮತ್ತು ವಿಧಾನಗಳ ಗುಣಮಟ್ಟದ ಬಗ್ಗೆ ಕಾಳಜಿ ಮತ್ತು ಒಲವು, ಉತ್ತಮ ಸಂವಹನ ಸಾಮರ್ಥ್ಯ, ವ್ಯಕ್ತಿ ಸಂಬಂಧ ಕೌಶಲ್ಯ, ತಂಡವಾಗಿ ದುಡಿಯಬಲ್ಲ ಸಾಮರ್ಥ್ಯಗಳಿರಬೇಕು. ಇಂಗ್ಲೀಶ್ ಭಾಷೆಯಲ್ಲಿ ಪ್ರಾಥಮಿಕ/ ವ್ಯವಹಾರಿಕ ಜ್ಞಾನ ಇರಬೇಕು. ಅಭ್ಯರ್ಥಿಗೆ ಕಲಿಯುವ ಮನಸ್ಸಿದ್ದಾಗ ಇದೇನೂ ಅವರನ್ನು ನಿರ್ಬಂಧಿಸುವ ಕಟ್ಟಳೆಯಾಗದು. ಸ್ಥಳೀಯ ಭಾಷೆಯಲ್ಲಿ ಮಾತನ್ನಾಡುವ, ಓದುವ ಮತ್ತು ಬರೆಯುವ ಸಾಮರ್ಥ್ಯಗಳು ಕಡ್ಡಾಯವಾಗಿ ಇರಬೇಕು. |
| 3 | ಕನಿಷ್ಠ ವಿದ್ಯಾರ್ಹತೆ | ಮೂಲವಿಷಯಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪಾಲಿಟೆಕ್ನಿಕ್/ ಹೆಸರುವಾಸಿಯಾದ ಸಂಸ್ಥೆಯಿಂದ ಐಟಿಐ/ ಡಿಪ್ಲೊಮಾ/ ಪದವಿ ಪಡೆದಿರಬೇಕು |
| 4ಎ | ಕಾರ್ಯಕ್ಷೇತ್ರ ಪ್ರಮಾಣೀಕರಣ (ಡೊಮೈನ್ ಸರ್ಟಿಫಿಕೇಶನ್) | ವಿದ್ಯಾರ್ಹತೆ ಪ್ಯಾಕ್: MES/ Q1401 – ಆವೃತ್ತಿ 1ರ ಅನ್ವಯ "ಸಂಕಲನಕಾರ" ಉದ್ಯೋಗಕ್ಕಾಗಿ ಪ್ರಮಾಣಿತ. ಸಂಬಂಧಪಟ್ಟ ಎಸ್ಎಸ್ಸಿ ಮಾರ್ಗದರ್ಶಿ ಸೂತ್ರದಂತೆ ಕನಿಷ್ಠ 80% ಅಂಕಗಳು ಪಡೆದಿರಬೇಕು. |
| 4ಬಿ | ಹುದ್ದೆ ಪ್ರಮಾಣೀಕರಣ (ಪ್ಲಾಟ್‌ಫಾರ್ಮ್ ಸರ್ಟಿಫಿಕೇಶನ್) | ತರಬೇತುದಾರನನ್ನು ವಿದ್ಯಾರ್ಹತೆ ಪ್ಯಾಕ್: SSC/Q1402ರ ಅನ್ವಯ "ತರಬೇತುದಾರ" ಹುದ್ದೆಗೆ ಪ್ರಮಾಣೀಕರಿಸಲು ಶಿಫಾರಸ್ಸು ಮಾಡಲಾಗಿದೆ. ಸಂಬಂಧಪಟ್ಟ ಎಸ್ಎಸ್ಸಿ (ವಲಯ ಕೌಶಲ್ಯ ಸಮಿತಿ) ಮಾರ್ಗದರ್ಶಿ ಸೂತ್ರದಂತೆ ಕನಿಷ್ಠ 80% ಅಂಕಗಳು ಪಡೆದಿರಬೇಕು. |
| 5 | ಅನುಭವ | ಅಭ್ಯರ್ಥಿಯು ಸಂಬಂಧಿತ ಕ್ಷೇತ್ರದಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವ ಹೊಂದಿರಬೇಕು. ಅವರು ಇಂಗ್ಲೀಷ್ ಮತ್ತು ಸ್ಥಳೀಯ ಭಾಷೆಗಳಲ್ಲಿ ಸಂವಹನ ನಡೆಸಬಲ್ಲವರಾಗಿರಬೇಕು. ಅವರಿಗೆ ಉಪಕರಣಗಳು, ಸಲಕರಣೆಗಳು, ಸಾಮಗ್ರಿ, ಸುರಕ್ಷತೆ, ಆರೋಗ್ಯ ಮತ್ತು ಸುರಕ್ಷತೆಗಳ ಜ್ಞಾನ ಇರಬೇಕು. |

## ಅನುಬಂಧ: ಮೌಲ್ಯಮಾಪನ ಮಾನದಂಡ

| ಮೌಲ್ಯಮಾಪನ ಮಾನದಂಡ | |
|---|---|
| ಉದ್ಯೋಗದ ಹೆಸರು: | ಸಂಕಲನಕಾರ |
| ವಿದ್ಯಾರ್ಹತೆ ಪ್ಯಾಕ್: | MES/ Q1401 – ಆವೃತ್ತಿ 1 |
| ವಲಯ ಕೌಶಲ್ಯ ಸಮಿತಿ | ಮಾಧ್ಯಮ ಮತ್ತು ಮನರಂಜನೆ |

| ಕ್ರ.ಸಂ. | ಮೌಲ್ಯಮಾಪನ ಮಾರ್ಗದರ್ಶಿ ಸೂತ್ರಗಳು |
|---|---|
| 1 | ಪ್ರತಿಯೊಂದು ವಿದ್ಯಾರ್ಹತೆ ಪ್ಯಾಕ್‌ನ ಮೌಲ್ಯಮಾಪನ ಮಾನದಂಡವನ್ನು ವಲಯ ಔಶಲ್ಯ ಸಮಿತಿಯು ಸಿದ್ಧಪಡಿಸುತ್ತದೆ. ಪ್ರತಿಯೊಂದು ಕಾರ್ಯಕ್ಷಮತೆ ಮಾನದಂಡಕ್ಕೂ ಅವುಗಳು ರಾ.ಔ.ಮಾ ದಲ್ಲಿ ಹೊಂದಿರುವ ಮಹತ್ವದ ಆಧಾರದ ಮೇಲೆ ಅಂಕಗಳ ಅನುಪಾತವನ್ನು ತೀರ್ಮಾನಿಸಲಾಗುತ್ತದೆ. ವಲಯ ಕೌಶಲ್ಯ ಸಮಿತಿಯು ಕೂಡಾ ಪ್ರತಿಯೊಂದು ಕಾರ್ಯಕ್ಷಮತೆ ಮಾನದಂಡಕ್ಕೂ ಅಂಕಗಳ ಅನುಪಾತವನ್ನು ಗೊತ್ತುಮಾಡುತ್ತದೆ. |
| 2 | ಮೌಲ್ಯಮಾಪನವು ವಲಯ ಕೌಶಲ್ಯ ಸಮಿತಿ (ಎಸ್‌ಎಸ್‌ಸಿ) ತೀರ್ಮಾನಿಸಿದ ಜ್ಞಾನ ಕೋಶಾಧಾರಿತ ಪ್ರಶ್ನೆಗಳ ಆಧಾರದ ಮೇರೆಗೆ ನಡೆಯುತ್ತದೆ. |
| 3 | ಖಾಸಗಿ ಮೌಲ್ಯಮಾಪನ ಸಂಸ್ಥೆಗಳು ಪರೀಕ್ಷಾ ಕೇಂದ್ರದಲ್ಲಿ/ ತರಬೇತಿ ಕೇಂದ್ರದಲ್ಲಿ ಬೋಧನೆಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ಶಿಕ್ಷಾರ್ಥಿಗೂ ಪ್ರತ್ಯೇಕವಾದ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುತ್ತದೆ. |
| 4 | ಖಾಸಗಿ ಮೌಲ್ಯಮಾಪನ ಸಂಸ್ಥೆಗಳು ಪರೀಕ್ಷಾ ಕೇಂದ್ರದಲ್ಲಿ/ ತರಬೇತಿ ಕೇಂದ್ರದಲ್ಲಿ ಪ್ರತಿಯೊಬ್ಬ ಶಿಕ್ಷಾರ್ಥಿಗೂ ಪ್ರತ್ಯೇಕವಾದ ಕೌಶಲ್ಯ ಮೌಲ್ಯಮಾಪನವನ್ನು ಕೈಗೊಳ್ಳುತ್ತವೆ. (ಕೆಳಗಿನ ಮೌಲ್ಯಮಾಪನ ಮಾನದಂಡಗಳಿಗೆ ಅನುಗುಣವಾಗಿ) |
| 5 | ವಿದ್ಯಾರ್ಹತೆ ಪ್ಯಾಕ್‌ನ್ನು ಉತ್ತೀರ್ಣರಾಗಲು ಪ್ರತಿಯೊಬ್ಬ ಶಿಕ್ಷಾರ್ಥಿಯೂ ರಾ.ಔ.ಮಾದ ಎಲ್ಲಾ ವಿಭಾಗಗಳ ಮೊತ್ತವಾಗಿ ಕನಿಷ್ಠ 70%ರಷ್ಟು ಅಂಕಿಗಳನ್ನು ಪಡೆದಿರತಕ್ಕದ್ದು. |
| 6 | ಕೆಲವು ಸಂಖ್ಯೆಯ ರಾ.ಔ.ಮಾ.ಗಳಲ್ಲಿ ಮಾತ್ರಾ ಉತ್ತೀರ್ಣರಾದವರು ಮತ್ತೊಮ್ಮೆ ಇನ್ನುಳಿದ ರಾ.ಔ.ಮಾ.ಗಳ ಮರುಮೌಲ್ಯಮಾಪನಕ್ಕೆ ಒಳಪಟ್ಟು/ ಪರೀಕ್ಷೆ ತೆಗೆದುಕೊಂಡು ವಿದ್ಯಾರ್ಹತೆ ಪ್ಯಾಕ್‌ಅನ್ನು ಉತ್ತೀರ್ಣರಾಗಬಹುದು. |

| ಮೌಲ್ಯಮಾಪನದ ಫಲಿತಾಂಶಗಳು | ಹೊರಬರುವವರ ಮೌಲ್ಯಮಾಪನದ ಮಾನದಂಡಗಳು | ಒಟ್ಟು ಅಂಕಗಳು | ಗರಿಷ್ಟ | ಅಂಕಗಳ ಹಂಚಿಕೆ | |
|---|---|---|---|---|---|
| | | | | ಪತ್ಯ | ಪ್ರಾಯೋಗಿಕ ಕೌಶಲ್ಯ |
| **MES/ N 1401** (ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಕೆಲಸದ ಹರಿವನ್ನು ಯೋಜಿಸುವುದು) | PC1. ನಿರ್ದೇಶಕರ ದೂರದೃಷ್ಟಿ, ಸೃಜನಶೀಲತೆ, ತಾಂತ್ರಿಕ ಅಗತ್ಯಗಳ ಜೊತೆಯಲ್ಲಿ ಕಾಲಮಿತಿ ಮತ್ತು ಅಂತಿಮ ಉತ್ಪನ್ನದ ಹೊರಪಡಿಕೆ ಕುರಿತು ನಿರೀಕ್ಷೆಗಳನ್ನು ಅರ್ಥ ಮಾಡಿಕೊಳ್ಳುವುದು. | | 20 | 10 | |
| | PC2. ಭಾವನೆಗಳ ಏರಿಳಿತ, ದೃಶ್ಯದ ವ್ಯಾಕರಣ, ಸ್ಫೂರ್ತಿದಾಯಕ ಅಂಶಗಳು ಹಾಗೂ ಪರಿವರ್ತನೆಯ ಅಗತ್ಯಗಳನ್ನೂ ಒಳಗೊಂಡಂತೆ ಕಥೆಯನ್ನು ಹೇಗೆ ಹೇಳಬೇಕೆಂಬುದನ್ನು ಅಥ ರ್ಮಾಡಿಕೊಳ್ಳುವುದು. | | 20 | 10 | |
| | PC3. ನಿರೀಕ್ಷಿತ ಫಲಿತಾಂಶವನ್ನು ಕೊಡಲು ಬೇಕಾದ ಮುಖ್ಯವಾದ ಉತ್ಪಾದನಾ ನಂತರದ ಪ್ರಕ್ರಿಯೆಗಳನ್ನು ಮುಂಚಿತವಾಗಿ ಗುರುತಿಸಿ ಅವುಗಳ ಜಾರಿಗೆ ಕೆಲಸದ ಹರಿವು ನಕ್ಷೆಯನ್ನು ಸಿದ್ಧಪಡಿಸುವುದು. (ಮೇಲ್ವಿಚಾರಕರು) | 100 | 20 | 10 | 50 |
| | PC4. ಕೆಲಸದ ಹರಿವನ್ನು ಚಿಕ್ಕ ಚಿಕ್ಕ ದೈನಂದಿನ ಚಟುವಟಿಕೆಗಳಾಗಿ ವಿಂಗಡಿಸಿಕೊಳ್ಳುವುದು | | 20 | 10 | |
| | PC5. ನಿರೀಕ್ಷಿತ ಫಲಿತಾಂಶವನ್ನು ಸಾಧಿಸಲು ಮಾಡಬೇಕಾದ ಪ್ರಕ್ರಿಯೆಗಳನ್ನು ಪೂರೈಸಲು ಅಗತ್ಯವಿರುವ ಶ್ರಮವನ್ನು ಮುನ್ನೆಣಿಕೆ ಮಾಡಿ, ಬಜೆಟ್ – ಕಾಲಮಿತಿ ಮತ್ತು ತಾಂತ್ರಿಕ ಮಿತಿಗಳ ಒಳಗೆ ಒಂದು ಕಾರ್ಯಯೋಜನೆಯನ್ನು ಮಾಡುವುದು. (ಮೇಲ್ವಿಚಾರಕರು) | | 20 | 10 | |
| | | Total | 100 | 50 | 50 |
| ಮೌಲ್ಯಮಾಪನದ ಫಲಿತಾಂಶಗಳು | ಹೊರಬರುವವರ ಮೌಲ್ಯಮಾಪನದ ಮಾನದಂಡಗಳು | ಒಟ್ಟು ಅಂಕಗಳು | ಗರಿಷ್ಟ | ಅಂಕಗಳ ಹಂಚಿಕೆ | |
| | | | | ಪತ್ಯ | ಪ್ರಾಯೋಗಿಕ ಕೌಶಲ್ಯ |
| **MES/ N 1402** (ಸಾಮಗ್ರಿಗಳು ಮತ್ತು ಉಪಕರಣಗಳ ನಿರ್ವಹಣೆ) | PC1. ಕಚ್ಚಾ ವಸ್ತುವನ್ನು/ ವೀಡಿಯೋಗಳನ್ನು ಒಟ್ಟು ಮಾಡಿ ಚಿತ್ರದ ಉತ್ಪಾದನೋತ್ತರ ಕೆಲಸಕ್ಕೆ ಬೇಕಿರುವಷ್ಟನ್ನು ಆರಿಸಿಕೊಳ್ಳುವುದು. | | 40 | 20 | |
| | PC2. ಕಚ್ಚಾ ವಸ್ತುವನ್ನು/ ವೀಡಿಯೋ ತುಣುಕುಗಳನ್ನು ಅರ್ಥೈಸಿಕೊಂಡು ಉತ್ಪಾದನೋತ್ತರ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವುದು. | | 25 | 10 | |
| | PC3. ತಂತ್ರಾಂಶಗಳು ಬಳಕೆಗೆ ಸಿದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು. (ಉದಾ: ಫೈನಲ್ ಕಟ್ ಪ್ರೊ, ಅವಿಡ್, ಆಫ್ಟರ್ ಎಫೆಕ್ಟ್ ಮತ್ತು ಸೌಂಡ್ ಕ್ಲೀನಿಂಗ್ ತಂತ್ರಾಂಶಗಳು) | 100 | 10 | 5 | 50 |
| | PC4. ಸೂಕ್ತ ಶೇಖರಣಾ ವಿಧಾನದಲ್ಲಿ ನಡುನಡುವೆ ಪರ್ಯಾಯ ಪ್ರತಿಗಳನ್ನು ಉಳಿಸಿ ಶೇಖರಿಸಿಡುವುದು. | | 10 | 5 | |
| | PC5. ಅಂತಿಮ ಉತ್ಪನ್ನವನ್ನು ಅಗತ್ಯವಿರುವ ನಮೂನೆಯಲ್ಲಿ (mp4, avi, wmv, mpg, mov.. ಇತ್ಯಾದಿ) ಉಳಿಸುವುದು ಮತ್ತು ಅಗತ್ಯದ/ ಪ್ರದರ್ಶನಕ್ಕೆ ಬೇಕಿರುವ ಮಾಧ್ಯಮಕ್ಕೆ (ಡಿವಿಡಿ, ಟೇಪು, ಫಿಲ್ಮ್, ಡಿಜಿಟಲ್ ಇತ್ಯಾದಿ) ವರ್ಗಾಯಿಸುವುದು | | 10 | 5 | |
| | PC6. ಹಿಂದಿನ ಬೇಡದ ದಾಖಲೆ/ ಮಾಹಿತಿ ಅಂಶಗಳನ್ನೆಲ್ಲಾ ತೆಗೆದು ಹಾಕಿ ತಂತ್ರಾಂಶವನ್ನು ಮುಂದಿನ ಯೋಜನೆಗೆ ಬಳಸಲು ಸಿದ್ಧಪಡಿಸಿಟ್ಟುಕೊಳ್ಳುವುದು. | | | | |
| | | Total | 100 | 50 | 50 |
| ಮೌಲ್ಯಮಾಪನದ ಫಲಿತಾಂಶಗಳು | ಹೊರಬರುವವರ ಮೌಲ್ಯಮಾಪನದ ಮಾನದಂಡಗಳು | ಒಟ್ಟು ಅಂಕಗಳು | ಗರಿಷ್ಟ | ಅಂಕಗಳ ಹಂಚಿಕೆ | |
| | | | | ಪತ್ಯ | ಪ್ರಾಯೋಗಿಕ ಕೌಶಲ್ಯ |
| **MES/ N 1403** (ಉತ್ಪನ್ನಗಳನ್ನು ಸಂಕಲಿಸಿ) | PC1. ಕಥೆಯ ಹರಿವನ್ನು ಮುಂದಾಗಿ ಊಹಿಸಿ, ಹೇಗಿರಬಹುದೆಂಬುದನ್ನು ಕಲ್ಪಿಸಿ ಮನದಲ್ಲಿಯೇ ಚಿತ್ರಿಸಿಕೊಳ್ಳುವುದು. | | 25 | 10 | |
| | PC2. ಅಗತ್ಯವಾದ ಕಥಾಹರಿವನ್ನು ಕಟ್ಟಿಕೊಡಲು ಬೇಕಾದ ತುಣುಕುಗಳು, ಧ್ವನಿ, ಸಂಗೀತ, ಸಂಭಾಷಣೆ ಗ್ರಾಫಿಕ್ಸ್ ಹಾಗೂ ವಿಶೇಷ ಪರಿಣಾಮಗಳನ್ನು ಮುಂದಾಗಿಯೇ ಮೌಲ್ಯಮಾಪನ ಮಾಡಿ ಸಿದ್ಧಪಡಿಸಿಟ್ಟುಕೊಳ್ಳುವುದು. | 100 | 20 | 10 | 50 |

| | | | | | |
|---|---|---|---|---|---|
| | PC3. ವೀಡಿಯೋ, ಚಿತ್ರಗಳು ಮತ್ತು ಧ್ವನಿಗಳ ಸಂಗ್ರಹದ ಆಸ್ತಿಯನ್ನು ಜೋಪಾನವಾಗಿ ನಿರ್ವಹಿಸುವುದು | | 20 | 10 | |
| | PC4. ಅತ್ಯಂತ ನಿಖರವಾಗಿ ಹಾಗೂ ಪರಿಣಾಮಕಾರಿಯಾಗಿ ನವೀಕೃತ ದಾಖಲೆಗಳನ್ನು, ಧ್ವನಿ ತುಣುಕುಗಳನ್ನು, ಸೌಂಡ್ ಟ್ರಾಕ್‌ಗಳನ್ನೂ ನಿರ್ವಹಿಸುವುದು. | | 15 | 10 | |
| | PC5. ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುವಂತೆ ಚಿತ್ರವನ್ನು/ ಉತ್ಪನ್ನವನ್ನು ನಿರ್ದಿಷ್ಟವಾದ ನಿರೀಕ್ಷಿತ ಪರಿಣಾಮಗಳನ್ನುಂಟು (ವೇಗ, ನಿರ್ದೇಶನ, ಶೈಲಿ, ಭಾವನೆಗಳು, ಪ್ರಭಾವಶಾಲಿ) ಮಾಡುವ ಹಾಗೆ, ನಿಗದಿತ ಮಾರ್ಗದರ್ಶನದಂತೆ ಕತ್ತರಿಸಿ, ಜೋಡಿಸಿ, ಸಾಲುಗೊಳಿಸಿ ಸಿದ್ಧಪಡಿಸುವುದು. | | 10 | 5 | |
| | PC6. ಅಂತಿಮ ಉತ್ಪನ್ನದಲ್ಲಿ ನಿರಂತರತೆ, ಸುಲಲಿತ ಹರಿವು/ ಪರಸ್ಪರ | | 10 | 5 | |
| | | ಒಟ್ಟು | 100 | 50 | 50 |
| **ಮೌಲ್ಯಮಾಪನದ ಫಲಿತಾಂಶಗಳು** | **ಹೊರಬರುವವರ ಮೌಲ್ಯಮಾಪನದ ಮಾನದಂಡಗಳು** | **ಒಟ್ಟು ಅಂಕಗಳು** | **ಗರಿಷ್ಠ** | **ಅಂಕಗಳ ಹಂಚಿಕೆ** | |
| | | | | **ಪಠ್ಯ** | **ಪ್ರಾಯೋಗಿಕ ಕೌಶಲ್ಯ** |
| **MES/ N 1404 (ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿ ಕೊಳ್ಳುವುದು)** | PC1. ಸಂಸ್ಥೆಯ ಪ್ರಸ್ತುತ ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ನಿಯಮಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಬದ್ಧರಾಗಿ ನಡೆಯುವುದು | 100 | 10 | 5 | 50 |
| | PC2. ನಿಮ್ಮ ಕಾರ್ಯಚಟುವಟಿಕೆಗೆ ಸಂಬಂಧಪಟ್ಟ ಎಲ್ಲಾ ಸುರಕ್ಷತಾ ಕಾರ್ಯವಿಧಾನಗಳನ್ನು ಅರ್ಥ ಮಾಡಿಕೊಳ್ಳುವುದು | | 10 | 5 | |
| | PC3. ಅನಾರೋಗ್ಯ, ಅಪಘಾತಗಳು, ಬೆಂಕಿ ಆಕಸ್ಮಿಕ ಮೊದಲಾದ ಸ್ಥಳಾಂತರವನ್ನು ಬೇಡುವ ತುರ್ತುಸಂದರ್ಭಗಳನ್ನೂ ಒಳಗೊಂಡಂತೆ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರವು ರೂಪಿಸಿರುವ ನೀತಿ ನಿಯಮಗಳನ್ನು ಅರ್ಥ ಮಾಡಿಕೊಳ್ಳುವುದು | | 5 | 3 | |
| | PC4. ತುರ್ತು ಸಂದರ್ಭಗಳಲ್ಲಿ ಸಂಪರ್ಕ ಮಾಡಬೇಕಾದ ಅಧಿಕಾರಿಗಳೂ ಸೇರಿದಂತೆ ಕೆಲಸದ ಸ್ಥಳದಲ್ಲಿನ ಆರೋಗ್ಯ ಮತ್ತು ಸುರಕ್ಷತೆಯ ನಿರ್ವಹಣೆಯ ಹೊಣೆಗಾರಿಕೆ ಹೊಂದಿರುವ ಅಧಿಕಾರಿಗಳನ್ನು ಗುರುತಿಸಿ | | 5 | 2 | |
| | PC5. ಮೆಟ್ಟಿಲುಗಳು, ಅಗ್ನಿಶಾಮಕ ವಾರ್ಡನ್ ಇರುವ ಜಾಗ, ಮೊದಲಾರೈಕೆ ಮತ್ತು ವೈದ್ಯಕೀಯ ನೆರವು ವಿಭಾಗಗಳೂ ಸೇರಿದಂತೆ ಎಲ್ಲೆಡೆಯಿರುವ ಸುರಕ್ಷತಾ ಸೂಚನೆಗಳನ್ನು ಗುರುತಿಸಿ. | | 10 | 5 | |
| | PC6. ನಿಮ್ಮ ಕೆಲಸದ ಸ್ಥಳದಲ್ಲಿ ನಿಮಗಾಗಲೀ ಅಥವಾ ಇನ್ನುಳಿದವರಿಗಾಗಲೀ ಸಂಭವನೀಯ ಅಪಾಯ ಉಂಟುಮಾಡುವ ಸನ್ನಿವೇಶ ಮತ್ತು ಸ್ಥಿತಿಗಳನ್ನು ಗುರುತಿಸಿ. | | 10 | 5 | |
| | PC7. ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ನೆರವಿನಿಂದ ನಿಮ್ಮ ಕೆಲಸದ ಸ್ಥಳದಲ್ಲಿ ನಿಮ್ಮ ಮತ್ತು ಇತರರ ಸುರಕ್ಷತೆಯನ್ನು ಖಾತ್ರಿ ಪಡಿಸಿಕೊಳ್ಳಿ | | 10 | 5 | |
| | PC8. ಆರೋಗ್ಯ, ಸುರಕ್ಷತೆ ಹಾಗೂ ಭದ್ರತಾ ವ್ಯವಸ್ಥೆಗಳನ್ನು ಸದಾಕಾಲ ಸುಧಾರಿಸುವ ಸಲಹೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುವುದನ್ನು ಗಮನದಲ್ಲಿರಿಸಿ | | 10 | 5 | |
| | PC9. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ | | 5 | 3 | |
| | PC10. ನಿಮ್ಮ ಕೆಲಸದ ವ್ಯಾಪ್ತಿಯ ಹೊರಗೆ ಯಾವುದಾದರೂ ಅಪಾಯಕಾರಿ ಸನ್ನಿವೇಶಗಳು ಕಂಡುಬಂದರೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತನ್ನು ಮತ್ತು ಆ ಸ್ಥಳದಲ್ಲಿನ ಇನ್ನಿತರನ್ನು ಜಾಗೃತಗೊಳಿಸಿ. | | 10 | 5 | |
| | PC11. ಅನಾರೋಗ್ಯ, ಬೆಂಕಿ ಅಪಘಾತಗಳು ಹಾಗೂ ಇನ್ನಿತರ ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ಸಂಸ್ಥೆಯು ಗೊತ್ತುಮಾಡಿದ ತುರ್ತು ಸಂದರ್ಭದ ಕಾರ್ಯವಿಧಾನಗಳನ್ನು ಪಾಲಿಸಿ. | | 10 | 5 | |
| | PC12. ನಿಮ್ಮ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟಂತೆ ಅನಾರೋಗ್ಯ, ಅಪಘಾತ, ಬೆಂಕಿ ಆಕಸ್ಮಿಕ ಮೊದಲಾದ ಸಂಭವನೀಯ ಅಪಾಯಗಳನ್ನು ಗುರುತಿಸಿ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳ ಮೂಲಕ ನಿವಾರಿಸಿ | | 5 | 2 | |
| | | Total | 100 | 50 | 50 |

**SANKALP**
Ministry of Skill Development
& Entrepreneurship


## ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

ಡೈರಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ,
ಹೊಂಬೇಗೌಡ ನಗರ, ಬೆಂಗಳೂರು-560029
**ಅಧಿಕೃತ ಜಾಲತಾಣ : www.kaushalkar.com**